ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
URL.www.anekal-pa.in, web5.kar.nic.in/e-vinyasa

ಸಂಖ್ಯೆ: ಆಯೋಪ್ರಾ:ಸಿಸಿ:992:2015-16 ದಿನಾಂಕ: 20 AUG 2019

## "ಕಟ್ಟಡ ಪೂರ್ಣಗೊಳಿಸಿದ ಪ್ರಮಾಣ ಪತ್ರ"

**ವಿಷಯ:** ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಚಂದಾಪುರ ಗ್ರಾಮದ ಸ.ನಂ.60/2ರಲ್ಲಿನ 01ಎಕರೆ 9.5ಗುಂಟೆ ಜಮೀನಿನ ಖಾತಾ ಸಂಖ್ಯೆ:1172/955ರಲ್ಲಿ ಪ್ರಾಧಿಕಾರದಿಂದ ಅನುಮೋದಿಸಲಾದ ಒಂಟಿ ನಿವೇಶನ ನಕ್ಷೆ ಪ್ರದೇಶದಲ್ಲಿ ಸ್ಟಿಲ್ಟ್+ನೆಲ ಮತ್ತು ಮೇಲಿನ 3 ಅಂತಸ್ತುಗಳಲ್ಲಿ ಒಟ್ಟು 104 ಘಟಕಗಳ ವಸತಿ ಸಮುಚ್ಚಯ ಕಟ್ಟಡ ನಕ್ಷೆಯಲ್ಲಿನ ಕಟ್ಟಡಕ್ಕೆ ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:**
1. ಪ್ರಾಧಿಕಾರದ ಪತ್ರ ಸಂಖ್ಯೆ:ಆಯೋಪ್ರಾ/ಸಿಸಿ/992/15-16 ದಿನಾಂಕ:13.07.2016.
2. ಶ್ರೀ ಶ್ರೀನಿವಾಸ್ ಬಿನ್ ಬೀರಪ್ಪ ಮತ್ತು ಇತರರ ಪರವಾಗಿ ಜಿಪಿಎ ದಾರರಾದ ಶ್ರೀ ವಿ.ಮದನ್ ಮೋಹನ್ ರೆಡ್ಡಿ ಮತ್ತು ಚಂದ್ರಶೇಖರ್ ಗರಸಿ ರವರ ಮನವಿ ದಿನಾಂಕ:28.03.2019.
3. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರ ಪತ್ರ ಸಂಖ್ಯೆ:W-311241 PCB ID:77183 ದಿನಾಂಕ:11.03.2019.
4. ಶ್ರೀ ಪ್ರವೀಣ್ ಕುಮಾರ್.ಜಿ ವಾಸ್ತುಶಿಲ್ಪಿ ಇವರು ಕಟ್ಟಡ ಪೂರ್ಣಗೊಂಡಿರುವ ಬಗ್ಗೆ ಪ್ರಮಾಣ ಪತ್ರ ನೀಡಿದ ದಿನಾಂಕ: 03.05.2019.
5. ಶ್ರೀ ಪ್ರವೀಣ್ ಕುಮಾರ್.ಜಿ ಇವರು ಕಟ್ಟಡದ Stability ಬಗ್ಗೆ ಪ್ರಮಾಣ ಪತ್ರ ದಿನಾಂಕ:03.05.2019.
6. ಪುರಸಭಾ ಕಾರ್ಯಾಲಯ, ಚಂದಾಪುರ ರವರ ಪತ್ರ ಸಂಖ್ಯೆ:ಪು.ಕಾ.ಚಂ/ಸಿ.ಆರ್/ / /2019-20 ದಿನಾಂಕ:24.05.2019.
7. ಪ್ರಾಧಿಕಾರಕ್ಕೆ ಭದ್ರತಾ ಠೇವಣಿ ಪಾವತಿಸಿದ ಬಗ್ಗೆ ದಿನಾಂಕ:11.07.2016 ಡಿ.ಡಿ.ಸಂಖ್ಯೆ:655520 ರೂ.6,09,000/-
8. ದಿನಾಂಕ:6.08.2015ರಂದು ನಡೆದ ಪ್ರಾಧಿಕಾರದ 54ನೇ ಸಭೆಯ ವಿಷಯ ಸಂಖ್ಯೆ:7ರ ನಿರ್ಣಯ.

********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಚಂದಾಪುರ ಗ್ರಾಮದ ಸ.ನಂ.60/2ರಲ್ಲಿನ 01ಎಕರೆ 9.5ಗುಂಟೆ ಜಮೀನಿನ ಖಾತಾ ಸಂಖ್ಯೆ:1172/955ರಲ್ಲಿ ಪ್ರಾಧಿಕಾರದಿಂದ ಅನುಮೋದಿಸಲಾದ ಒಂಟಿ ನಿವೇಶನ ನಕ್ಷೆ ಪ್ರದೇಶದಲ್ಲಿ ಸ್ಟಿಲ್ಟ್+ನೆಲ ಮತ್ತು ಮೇಲಿನ 3 ಅಂತಸ್ತುಗಳಲ್ಲಿ ಒಟ್ಟು 104 ಘಟಕಗಳ ವಸತಿ ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ನೀಡಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

ಉಲ್ಲೇಖ(2)ರಲ್ಲಿ ಅರ್ಜಿದಾರರು ವಸತಿ ಉದ್ದೇಶಕ್ಕಾಗಿ ಕಟ್ಟಡ ಪೂರ್ಣಗೊಳಿಸಿದ ಪ್ರಮಾಣ ಪತ್ರ ನೀಡುವಂತೆ ಕೋರಿರುತ್ತಾರೆ. ಉಲ್ಲೇಖ(3)ರಂತೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ. ಉಲ್ಲೇಖ(4) ಮತ್ತು ಉಲ್ಲೇಖ(5)ರಲ್ಲಿ ಶ್ರೀ ಪ್ರವೀಣ್ ಕುಮಾರ್.ಜಿ Structural Designer ಇವರು Stability certificate ಮತ್ತು ವಾಸ್ತುಶಿಲ್ಪಿ ಇವರು ನಿಯಮಾನುಸಾರ ಕಟ್ಟಡ ನಿರ್ಮಿಸಿರುವ ಬಗ್ಗೆ ಪ್ರಮಾಣ ಪತ್ರ ನೀಡಿರುತ್ತಾರೆ.

ಪು.ತಿ.ನೋ.

ಉಲ್ಲೇಖ(6)ರಂತೆ ಪುರಸಭಾ ಕಾರ್ಯಾಲಯ, ಚಂದಾಪುರ ದಿಂದ ಅನುಮೋದಿತ ನಕ್ಷೆಯಂತೆ ಕಟ್ಟಡ ನಿರ್ಮಿಸಿರುವ ಬಗ್ಗೆ ದೃಢೀಕರಣ ಪತ್ರ ನೀಡಿರುತ್ತಾರೆ.

ಅರ್ಜಿದಾರರು ವಲಯನಿಯಮಾವಳಿಗನುಗುಣವಾಗಿ ಕಟ್ಟಡವನ್ನು ನಿರ್ಮಿಸಿದ್ದು, ಅನುಮೋದಿತ ನಕ್ಷೆಗೆ ವಿರುದ್ಧವಾಗಿ ಕೆಲವೊಂದು ಆಂತರಿಕ ಬದಲಾವಣೆಗಳಾಗಿರುವುದರಿಂದ ಉಲ್ಲೇಖ(7)ರಂತೆ ಪಾವತಿಸಿರುವ **ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಕೆಳಕಂಡ ನಿಬಂಧನೆಗಳಿಗೊಳಪಟ್ಟು ಕಟ್ಟಡ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ ನೀಡಲಾಗಿದೆ.**

1. ಸದರಿ ಕಟ್ಟಡವನ್ನು ಅನುಮೋದಿತ ನಕ್ಷೆಯಲ್ಲಿ ನಮೂದಿಸಿರುವಂತೆ ವಸತಿ ಉಪಯೋಗಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
2. ಈ ಪ್ರಮಾಣ ಪತ್ರವು ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಅಧಿನಿಯಮಕ್ಕೆ ಸೀಮಿತವಾಗಿರುತ್ತದೆ. ಪ್ರಾರಂಭಿಕ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ನು ಪರಿಪಾಲಿಸತಕ್ಕದ್ದು.
3. ಕಟ್ಟಡದ ಸ್ಥಿರತೆಯ ಬಗ್ಗೆ ವಾಸ್ತುಶಿಲ್ಪಿ/ಇಂಜಿನಿಯರ್ ರವರುಗಳೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಯೋಜನಾ ಪ್ರಾಧಿಕಾರವು ಜವಬ್ದಾರಿಯಾಗಿರುವುದಿಲ್ಲ.
4. ಈ ಕಟ್ಟಡ ಪೂರ್ಣಗೊಳಿಸಿದ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ನಾಗರೀಕ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.
5. ಕಟ್ಟಡದ ಮುಂಭಾಗದ ರಸ್ತೆಯನ್ನು ಅಭಿವೃದ್ಧಿ/ನಿರ್ವಹಣೆಯನ್ನು ಅಭಿವೃದ್ಧಿದಾರರು/ಕಟ್ಟಡದ ಮಾಲೀಕರ ಸಂಘದವರು ಮಾಡತಕ್ಕದ್ದು.
6. ಅಭಿವೃದ್ಧಿ ಯೋಜನೆಯಂತೆ ಸೌರಶಕ್ತಿಯ ವಿದ್ಯುತ್‌ಅನ್ನು ಅಳವಡಿಸಿ ಉಪಯೋಗಿಸತಕ್ಕದ್ದು.
7. ಪ್ರಸ್ತಾವಿತ ಪ್ರದೇಶದಲ್ಲಿ ಅಭಿವೃದ್ಧಿ ಯೋಜನಾ ನಕ್ಷೆಯಂತೆ ವಾಹನ ನಿಲುಗಡೆಗೆ ಕಾಯ್ದಿರಿಸಿದ ಪ್ರದೇಶವನ್ನು ಅದೇ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
8. STPನ್ನು KSPCB ರವರ ಸೂಚನೆಯಂತೆ, ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡತಕ್ಕದ್ದು.
9. ಸಾರ್ವಜನಿಕರಿಗಾಗಿ ವಾಹನ ನಿರ್ವಹಣೆಗೆ ಕಾಯ್ದಿರಿಸಿದ ಪ್ರದೇಶವನ್ನು ಅದೇ ಉದ್ದೇಶಕ್ಕೆ ಉಪಯೋಗಿ -ಸತಕ್ಕದ್ದು.
10. ಪ್ರಸ್ತಾವಿತ ಪ್ರದೇಶದಲ್ಲಿ ಬರುವ 'ಬ' ಖರಾಬು ಪ್ರದೇಶವು ಸರ್ಕಾರದ ಸ್ವತ್ತಾಗಿದ್ದು, ಸದರಿ ಪ್ರದೇಶವನ್ನು ಗುರುತಿಸಿ ನಾಮಫಲಕಗಳನ್ನು ಅಳವಡಿಸತಕ್ಕದ್ದು.
11. ಹಸಿ ಕಸ ಹಾಗೂ ಒಣ ಕಸವನ್ನು ಪ್ರತ್ಯೇಕವಾಗಿ ಶೇಖರಿಸಿ ಗೊಬ್ಬರವಾಗಿ ಮಾರ್ಪಡಿಸತಕ್ಕದ್ದು.
12. ಸೋಲಾರ್ ಲೈಟ್ಸ್ ಮತ್ತು ಸೋಲಾರ್ ವಾಟರ್ ಹಿಟರ್ ವ್ಯವಸ್ಥೆಯನ್ನು ಕಟ್ಟಡದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.

ಪು.ತಿ.ನೋ.

13. ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ ನೀಡುವ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಅನುಮೋದನೆಯು ಯಾವ ಪೂರ್ವ ಸೂಚನೆಯು ಇಲ್ಲದೇ ತಂತಾನೆ ರದ್ದುಗೊಳ್ಳುತ್ತದೆ.

20/08

**ಸದಸ್ಯ- ಕಾರ್ಯದರ್ಶಿ ಹಾಗೂ ನಗರ ಮತ್ತು**

**ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು(ಪ್ರ),**

ಆನೇಕಲ್ ಯೋಜನಾ ಪ್ರಾಧಿಕಾರ,

ಆನೇಕಲ್. 20.8.19

**ಇವರಿಗೆ,**

**ಶ್ರೀ ಶ್ರೀನಿವಾಸ್ ಬಿನ್ ಬೀರಪ್ಪ ಮತ್ತು ಇತರರ ಪರವಾಗಿ**

**ಜಿಪಿಎ ದಾರರಾದ ಶ್ರೀ ವಿ.ಮದನ್ ಮೋಹನ್ ರೆಡ್ಡಿ**

**ಮತ್ತು ಚಂದ್ರಶೇಖರ್ ಗರಸಿ**

ಚಂದಾಪುರ, ಅತ್ತಿಬೆಲೆ ಹೋಬಳಿ,

ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.